ದಿನಾಂಕ 08/06/2017 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ಎಸ್.ಎ ವಕೀಲರಿಂದ

ನಾನು ಹುಟ್ಟಿದಾಗಿನಿಂದಲೂ ಗೋಂಧಿಮಲ್ಲೇನಹಳ್ಳಿಯಲ್ಲಿ ವಾಸವಿದ್ದೇನೆ. ನನಗೆ ಸ್ವಂತ ಜಮೀನಿದೆ. ನನಗೆ 10 ಗುಂಟೆ ಜಮಿನಿದೆ. ನಾನು ಕೂಲಿ ಕೆಲಸಕ್ಕೆ 43 ವರ್ಷಗಳಿಂದಲೂ ಬೇರೆ ಬೇರೆ ಊರುಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಹೊಳೆನರಸೀಪುರದ ರಂಗಪ್ಪನವರ ಜಮೀನಿಗೆ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಅವರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಪ್ರತಿವಾದಿಗಳು ನಮಗೆ 43 ವರ್ಷಗಳಿಂದಲೂ ಪರಿಚಯವಿದೆ. ಆ ಊರಿನಲ್ಲೇ ಮನೆ ಮತ್ತು ಜಮೀನಿದೆ. ಮಹಾದೇವಯ್ಯ, ಸೋಮಶೇಖರ ಮತ್ತು ಶಿವರಾಜ ಅವರಿಗೆ ಪ್ರತ್ಯೇಕ ಸ್ವಂತ ಮನೆಗಳಿವೆ. ಆ ಮನೆಗಳಲ್ಲೇ ಮಹಾದೇವಯ್ಯ, ಸೋಮಶೇಖರ ಮತ್ತು ಶಿವರಾಜ ಅವರ ಕುಟುಂಬಗಳು ವಾಸವಿದ್ದಾರೆ. ಗುಂಟೆ ಮಹದೇವಯ್ಯವನವರಿಗೆ ಬಂದ ಜಮೀನಿನಲ್ಲಿ ಸರ್ವೆ ನಂಬರ್ 63/63 ರಲ್ಲಿ 1 ಎಕರೆ ಜಮೀನಿದೆ. ಕೂಲಿ ಮಾಡಿದ್ದ ಹಣ ಮಹದೇವಯ್ಯನ ಕುಟುಂಬ ಕೊಡುತ್ತಿತ್ತು. ಶಿವರಾಜನವರ ಮತ್ತು ಸೋಮಶೇಖರ ಪಾಲಿಗೆ ಬಂದ 63/63 ರ ಸರ್ವೆ ನಂಬರ್ ನಲ್ಲಿ ಕೂಲಿ ಮಾಡುತ್ತಿದ್ದೇನೆ. ಮಹದೇವಯ್ಯನವರು ಈಗ ಜೀವಂತವಿಲ್ಲ. ಅವರು ಇರುವ ತನಕ ಅವರೇ ನಮಗೆ ಕೂಲಿ ಕೊಡುತ್ತಿದ್ದರು. ಅವರು ತೀರಿ ಹೋಗಿ 5-6 ವರ್ಷ ಆಗಿದೆ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ ಅದರಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿಲ್ಲ. ವಾದಿಗಳಿಗೆ ಕಾಮಸಮದ್ರ ಗ್ರಾಮದಲ್ಲಿ ಆರು ಕಡೆ ಎಷ್ಟೆಷ್ಟು ವಿಸ್ತೀರ್ಣ ಇದೆ ಎಂದು ನನಗೆ ಹೇಳಲು ಗೊತ್ತಾಗುವುದಿಲ್ಲ. ಮಹದೇವಯ್ಯ, ಶಿವರಾಜು ಮತ್ತು ಸೋಮಶೇಖರ ಅವರಿಗೆ ಕಾಮಸಮುದ್ರ ಗ್ರಾಮದಲ್ಲಿ ಗೋಂಧಿಮಲ್ಲೇನಹಳ್ಳಿಯಲ್ಲಿ ಜಮೀನಿರುವ 6 ಕಡೆ ಇದೆ. ಮಹದೇವಯ್ಯನವರಿಗೆ ಮಕ್ಕಳಿಲ್ಲ. ತಮ್ಮನ ಮಗ ಉಮೇಶನನ್ನು ದತ್ತು ಮಾಡಿಕೊಂಡಿದ್ದರು. ಮಹದೇವಯ್ಯನವರು ತೀರಿದಾಗ ಉಮೇಶನೇ ಅವರ ಉತ್ತರ ಕ್ರಿಯಾದಿಗಳನ್ನು ಈಡೇರಿಸಿದರು. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಕೊನೆಯ ಕಂತಿಕೆಯಲ್ಲಿ ಹೇಳಿರುವ ವಿಷಯಗಳು ಸರಿ. ವಾದಿಗಳಿಗೆ 1 ಎಕಡೆ 7 ಗುಂಟೆ ಮಹಾದೇವಯ್ಯನವರು ತೀರಿಕೊಂಡಾಗಿನಿಂದ ಅವರಿಗೆ ಬಂದಿದೆ. ಸೋಮಶೇಖರ ಎಂಬುವವರು ತೀರಿ ಹೋಗಿದ್ದು ಅವರಿಗೂ ಮಕ್ಕಳಿಲ್ಲ. ಅವರ 2 ನೇ ಹೆಂಡತಿ ಜಾನಕಿ ಕೂಡ ತೀರಿ ಹೋಗಿದ್ದಾರೆ.

ಸೋಮಶೇಖರ ಮತ್ತು ಜಾನಕಿರವರ ಉತ್ತರ ಫಿರ್ಯಾದಿಗಳನ್ನು ಶಿವಪ್ಪನವರು ಮಾಡಿದರು ಎಂದರೆ ಸಾಕ್ಷಿ ವಾದಿ ರಾಣಿರವರು ಸೇರಿ ಮಾಡಿದ್ದಾರೆ ಸೋಮಶೇಖರ ಮತ್ತು ಜಾನಕಿರವರ ಉತ್ತರ ಫಿರ್ಯಾದಿಗಳನ್ನು ಶಿವಪ್ಪನವರು ಜೀವಂತ ಇರುವಾಗಲೇ 60 ವರ್ಷಗಳ ಹಿಂದೆಯೇ ಪಾಲು ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಈ ಎಲ್ಲಾ ಉತ್ತರಗಳು ನನಗೆ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

12 ನೇ ಪ್ರತಿವಾದಿ ಪರ ವಕೀಲರಿಂದ ಪಾಟೀಸವಾಲುಃ

ನ್ಯಾ.ಕ್ಕೆ ಈ ದಿನ ಸಾಕ್ಷಿ ನುಡಿಯಲು ವಾದಿ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ ಸ್ವತಃ ನಾನೇ ಬಂದಿರುತ್ತೇನೆ. ಸಾಕ್ಷಿ ನುಡಿಯಲು ವಾದಿ ಉಮೇಶರವರ ಪತ್ನಿ. ಉಮೇಶನವರು ತಂದೆ ಶಿವರಾಜ. ಈಗ 45 ವರ್ಷಗಳಿಂದಲೇ ಉಮೇಶಮತ್ತು ಶಿವರಾಜ ನವರ ನಡುವೆ ವಿಭಾಗವಾಗಿದೆ ಎಂದರೆ ಸಾಕ್ಷಿ ಒಟ್ಟಿಗೆ ಎಂದು ಹೇಳುತ್ತಾರೆ. ವಾದಿಗೆ ಅವರ ಮಾವನ ಆಸ್ತಿಯ ಮೇಲೆ ಮಾತ್ರ ಹಕ್ಕಿದೆ ಎಂದರೆ ಸಾಕ್ಷಿ ಎಲ್ಲಾ ಆಸ್ತಿಗಳ ಮೇಲೆ ಹಕ್ಕಿದೆ ಎಂದು ಹೇಳುತ್ತಾರೆ. ಈ ಹಂತದಲ್ಲಿ ಸಾಕ್ಷಿ ವಕೀಲರು ಕೇಳಿದ ಪ್ರಶ್ನೆಗೆ ಉತ್ತರ ಕೊಡದೇ ವಕೀಲರ ಮೇಲೆಯೇ ಜೋರಾಗಿ ಕೂಗಾಡಿದ್ದರಿಂದ ಮುಂದಿನ ಪಾಟೀಸವಾಲನ್ನು ಮುಂದೂಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.